# ಪತ್ರಿಕಾ ಪ್ರಕಟಣೆ

ಇಸ್ಕಾನ್ ಬೆಂಗಳೂರು ಮತ್ತು ಇಸ್ಕಾನ್ ಮುಂಬಯಿ ಇವರ ನಡುವಿನ ದಶಕ ಉದ್ದದ ಕಾನೂನು ಸಮರದಲ್ಲಿ ದಿನಾಂಕ 23ನೇ ಮೇ 2011ರಂದು, ಹೈ-ಕೋರ್ಟ್ ನೀಡಿದ ತೀರ್ಪಿನಿಂದಾಗಿ ಇಸ್ಕಾನ್ ಬೆಂಗಳೂರು ಸ್ವಲ್ಪ ಹಿನ್ನಡೆ ಅನುಭವಿಸಿದೆ. ಇಸ್ಕಾನ್ ಮುಂಬೈ ಮತ್ತು ಬೆಂಗಳೂರಿನ ನಡುವಿನ ಮೊಕದ್ದಮೆಗೆ ಇಂದು ಕರ್ನಾಟಕದ ಉಚ್ಚನ್ಯಾಯಾಲವು ತನ್ನ ತೀರ್ಪನ್ನು ನೀಡಿದೆ. ಮಾನ್ಯ ಹೈಕೋರ್ಟ್ ನ್ಯಾಯಧೀಶರಾದ ಶ್ರೀ ನಾಗಮೋಹನ್ ದಾಸ್ ಮತ್ತು ಅರಳಿ ನಾಗರಾಜ್ ಇರುವ ದ್ವಿಸದಸ್ಯ ಪೀಠವು ಬೆಂಗಳೂರಿನ ಸಿವಿಲ್ ನ್ಯಾಯಾಲಯವು ಇಸ್ಕಾನ್ ಬೆಂಗಳೂರಿನ ಪರವಾಗಿ ನೀಡಿದ್ದ 350 ಪುಟದ ತೀರ್ಪನ್ನು ಈ ಮೂಲಕ ಬದಿಗಿರಿಸಿದ್ದಾರೆ.

ಸುಪ್ರಿಂ ಕೋರ್ಟ್ ನಿರ್ದೇಶನದಂತೆ ಬೆಂಗಳೂರಿನ ನಗರ ನ್ಯಾಯಾಲಯದಲ್ಲಿ ಸುಧೀರ್ಘ ವಿಚಾರಣೆ ನಡೆದು ಇಸ್ಕಾನ್ ಬೆಂಗಳೂರಿನ ಪರವಾಗಿ ನ್ಯಾಯದಾನವಾಗಿತ್ತು. ಇಸ್ಕಾನ್ ಬೆಂಗಳೂರು ಮತ್ತು ಇಸ್ಕಾನ್ ಮುಂಬೈ ನಡುವೆ ಗುರುವಿನ ಸ್ಥಾನದ ಸಂಬಂಧ ಉಂಟಾದ ತಾತ್ತ್ವಿಕ ಜಿಜ್ಞಾಸೆಗಳು ಕ್ರಮೇಣ ವಿವಾದದ ಸ್ವರೂಪ ಪಡೆದು ಕಟ್ಲೆಗಳನ್ನು ಹಾಕಲಾಗಿತ್ತು. ಪ್ರಸ್ತುತ ಹೈ-ಕೋರ್ಟ್ ತೀರ್ಪಿನ ವಿವರಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಲಾಗುತ್ತಿದೆ. ದೇಶದ ನ್ಯಾಯ ವ್ಯವಸ್ಥೆಯ ಬಗ್ಗೆ ನಮಗೆ ಅಪಾರ ಗೌರವ, ನಂಬಿಕೆಗಳಿವೆ. ದೇಶದ ಸರ್ವೋಚ್ಚನ್ಯಾಯಾಲಯದಲ್ಲಿ ಇಸ್ಕಾನ್ ಬೆಂಗಳೂರು ಹೈ-ಕೋರ್ಟ್ ತೀರ್ಪಿಗೆ ತಡೆಕೋರಿ ಅರ್ಜಿ ಸಲ್ಲಿಸಲಿದೆ. ದೇಶದ ನ್ಯಾಯ ವ್ಯವಸ್ಥೆಯಲ್ಲಿ ನಮಗೆ ಖಂಡಿತ ಜಯ ದೊರೆಯುವುದು ಎಂಬ ನಂಬಿಕೆ ನಮಗಿದೆ. ದೇವಾಲಯದ ದರ್ಶನ, ಪೂಜೆ, ಆರಾಧನೆಗಳು, ಅಕ್ಷಯ ಪಾತ್ರೆಯ ನಿತ್ಯ ಅನ್ನದಾಸೋಹ, ವಿವಿಧ ವಿಭಾಗಗಳ ಕಚೇರಿ ಕಾರ್ಯ - ಕಲಾಪಗಳು ಸುಸೂತ್ರವಾಗಿ ಎಂದಿನಂತೆ ಜರುಗುತ್ತವೆ. ಸಾರ್ವಜನಿಕರು ಎಂದಿನಂತೆ ಸಹಕರಿಸಬೇಕೆಂದು ಈ ಮೂಲಕ ಕೋರುತ್ತಿದ್ದೇವೆ.

ವಂದನೆಗಳೊಂದಿಗೆ,

ಇಂತಿ ಶ್ರೀಕೃಷ್ಣನ ಸೇವೆಯಲ್ಲಿ ತಮ್ಮವ,

**ಮಧುಪಂಡಿತ ದಾಸ**
ಅಧ್ಯಕ್ಷರು,
ಇಸ್ಕಾನ್, ಬೆಂಗಳೂರು